4. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ಒದಗಿಸಲಾದ ಉತ್ತರಗಳ ಪಟ್ಟಿ.

Mr. Speaker.— Now, the Minister will place written answers.

Sri A. Lakshmisagar.— Sir, I beg to place on the table of the House sixth list of written answers :

ವಿಷಯ : ರೈತರ ಸಲುವಾಗಿ ರಾಜ್ಯದಲ್ಲಿ ಸಾವ ಯಹಿಕ ನೀರಾವರಿ ಯೋಜನೆ ಪ್ರಾರಂಭಿಸುವುದು.

ಪ್ರಶ್ನೆ : **205 (39) ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ** (ಗುಲೇದಗುಡ್ಡ).—ಮಾನ್ಯ ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :

ಅ) ರೈತರ ಸಲುವಾಗಿ ರಾಜ್ಯದಲ್ಲಿ ಬರಗಾಲ ಬವಣೆ ತಪ್ಪಿಸಲು ಸಾಮೂಹಿಕ ಬಾವಿ ನೀರಾವರಿ ಯೋಜನೆ ಪ್ರಾರಂಭಿಸುವ ವಿಚಾರ ಸರಕಾರದವರಲ್ಲಿದೆಯೇ ;

ಆ) ಹಾಗಿದ್ದಲ್ಲಿ, ಅದರ ರೂಪರೇಖೆಗಳೇನು?

ಉತ್ತರ : ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮಂತ್ರಿಗಳು).— ಸಾಮೂಹಿಕ ಬಾವಿ ನೀರಾವರಿ ಯೋಜನೆಯು 1970-71ನೇ ಇಸವಿಯಿಂದ ಜಾರಿಯಲ್ಲಿರುತ್ತದೆ. ಈ ಯೋಜನೆಯು ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಪ್ರಯೋಜನವನ್ನು ನೀಡುತ್ತದೆ.

1. ಈ ಯೋಜನೆಗಳು ಸಹಕಾರ ಸಂಘಗಳು ಅಥವಾ ಪಂಚಾಯಿತಿಗಳು ಅಥವಾ ಕಾರ್ಪೊರೇಷನ್‌ಗಳ ಸ್ವಂತ ಸ್ವತ್ತಾಗಿರಬೇಕು ಮತ್ತು ಅವುಗಳ ಉಪಯೋಗ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಸಿಗುವಂತಾಗಬೇಕು

2. ಶೇಕಡಾ 50ಕ್ಕಿಂತ ಹೆಚ್ಚಿನ ಫಲಾನುಭವಿಗಳು ಸಣ್ಣ ಮತ್ತು ಅತಿ ಸಣ್ಣ ರೈತರಾಗಿರಬೇಕು.

3. ನೀರಿನ ತೆರಿಗೆಯನ್ನು ವಿಧಿಸುವಾಗ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ 5 ವರ್ಷದ ಮಟ್ಟಿಗೆ ರಿಯಾಯಿತಿ ಕೊಡತಕ್ಕದ್ದು.

4. ಸಹಾಯಧನವು ಸಣ್ಣ ಮತ್ತು ಅತಿ ಸಣ್ಣ ರೈತರ ಪಾಲಿಗೆ ಬರಬಹುದಾದ ವಿರ್ಜಿನ ಅರ್ಧ ಭಾಗವನ್ನು ಮಾತ್ರ ಕೊಡುವುದು.

ವಿಷಯ : ಹೊನ್ನಾವರ ತಾಲ್ಲೂಕಿನ ಮಂಕಿ ಗ್ರಾಮದಲ್ಲಿ ಪ್ರೌಢಶಾಲೆ ಕಟ್ಟುವುದು

ಪ್ರಶ್ನೆ : **206 (612) ಶ್ರೀ ಆರ್.ಎಸ್. ನಾಯ್ಕ** (ಭಟ್ಕಳ).— ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಹೊನ್ನಾವರ ತಾಲ್ಲೂಕಿನ ಮಂಕಿ ಗ್ರಾಮದಲ್ಲಿ ಪ್ರೌಢಶಾಲಾ ಕಟ್ಟಡ ಕಟ್ಟಿಸುವುದರ ಬಗ್ಗೆ ಸಾಸಕರಿಂದ ಹಾಗೂ ಸಾರ್ವಜನಿಕರಿಂದ ಬೇಡಿಕೆಗಳೇನಾದರೂ ಬಂದಿವೆಯಾ?

ಆ) ಹಾಗಿದ್ದಲ್ಲಿ ಆ ಬಗ್ಗೆ ಕೈಗೊಂಡ ಕ್ರಮವೇನು?

ಉತ್ತರ : ಶ್ರೀ ಬಿ. ರಾಚಯ್ಯ (ಶಿಕ್ಷಣ ಸಚಿವರು).— ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ವಿಷಯ : ಸರಕಾರದ ಶಾಲಾ ಕಾಲೇಜುಗಳಲ್ಲಿ ಸಿಬ್ಬಂದಿ ವರ್ಗದ ಕೊರತೆ

ಪ್ರಶ್ನೆ : **207 (542) ಶ್ರೀ ಪಂಪಾಪತಿ** (ದಾವಣಗೆರೆ).— ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಸರ್ಕಾರದ ಶಾಲಾ ಕಾಲೇಜುಗಳಲ್ಲಿ ಖಾಲಿ ಇರುವ ಉಪಾಧ್ಯಾಯರ ಮತ್ತು ಇತರ ಸಿಬ್ಬಂದಿಯವರ ಹುದ್ದೆಗಳ ಸಂಖ್ಯೆ ಎಷ್ಟು ? (ಶಾಲಾ ಕಾಲೇಜುವಾರು ವಿವರ ನೀಡಬೇಕಾಗಿ ವಿನಂತಿ).

ಆ) 1983ರಲ್ಲಿ ತುಂಬಿರುವ ಖಾಲಿ ಹುದ್ದೆಗಳ ಸಂಖ್ಯೆ ಎಷ್ಟು ;

ಇ) ಶಿಕ್ಷಕರ ಹುದ್ದೆಗಳು ಖಾಲಿ ಇರುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆ ಆಗುತ್ತಿರುವುದು ಮತ್ತು ಶಿಕ್ಷಣದ ಮಟ್ಟ ಇಳಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಈ) ಖಾಲಿ ಇರುವ ಹುದ್ದೆಗಳನ್ನು ಎಷ್ಟು ದಿನಗಳಲ್ಲಿ ಭರ್ತಿ ಮಾಡಲಾಗುವುದು?

ಉತ್ತರ : ಶ್ರೀ ಬಿ. ರಾಚಯ್ಯ.— (ವಿದ್ಯಾ ಮಂತ್ರಿಗಳು).—

ಅ)	ಉಪಾಧ್ಯಾಯರು	ಇತರೆ
1.	ಪ್ರಾಥಮಿಕ ಶಾಲೆ	13861 —
2.	ಪ್ರೌಢ ಶಾಲೆ	1628 401

	3. ಕಿರಿಯ ಕಾಲೇಜು	647	57
	4. ಕಾಲೇಜುಗಳು	320	364
	5. ಪಾಲಿಟೆಕ್ನಿಕ್	146	213
	6. ತಾಂತ್ರಿಕ ಶಾಲೆಗಳು	22	65
	7. ಇಂಜಿನಿಯರಿಂಗ್ ಕಾಲೇಜು	10	11
ಆ)	1. ಪ್ರಾಥಮಿಕ ಶಾಲೆ	ಇಲ್ಲ	—
	2. ಪ್ರೌಢ ಶಾಲೆ	ಇಲ್ಲ	—
	3. ಕಿರಿಯ ಕಾಲೇಜು	113	280
	4. ಕಾಲೇಜುಗಳು	158	924
	5. ಪಾಲಿಟೆಕ್ನಿಕ್	52	76
	6. ತಾಂತ್ರಿಕ ಶಾಲೆ	4	39
	7. ಇಂಜಿನಿಯರಿಂಗ್	26	11

ಇ) ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ಖಾಯಂ ಆಗಿ ತುಂಬುವವರೆಗೆ ಹಂಗಾಮಿಯಾಗಿ ನೇಮಿಸಲಾಗುತ್ತಿದೆ.

ಈ) ಲೋಕ ಸೇವಾ ಆಯೋಗ ಮತ್ತು ಜಲ್ಲಾ ಆಯ್ಕೆ ಸಮಿತಿಯಿಂದ ಅಭ್ಯರ್ಥಿಗಳ ಪಟ್ಟಿ ಬಂದ ತಕ್ಷಣ ಹುದ್ದೆಗಳನ್ನು ತುಂಬಲಾಗುವುದು.

ವಿಷಯ : ದೊಡ್ಡ ಪ್ರಾಥಮಿಕ ಶಾಲೆಗಳನ್ನು ಮಾಧ್ಯಮಿಕ ಶಾಲೆಗಳನ್ನಾಗಿ ಪರಿವರ್ತಿಸುವುದು

ಪ್ರಶ್ನೆ : 209 (460) ಶ್ರೀ ಬಿ.ಜಿ. ಬಣಕಾರ (ಹಿರೇಕೆರೂರು).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ರಾಜ್ಯದ ಎಷ್ಟು ಪ್ರಾಥಮಿಕ ಶಾಲೆಗಳ 7ನೇ ಈಯತ್ತೆಯಲ್ಲಿ 20ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿರುವರು. (ಜಿಲ್ಲಾವಾರು ವಿವರ ಒದಗಿಸುವುದು).

ಆ) ಇಂತಹ ಪ್ರಾಥಮಿಕ ಶಾಲೆಗಳಿರುವ ಗ್ರಾಮಗಳಲ್ಲಿ ಮಾಧ್ಯಮಿಕ ಶಾಲೆಗಳಲ್ಲದಿದ್ದಲ್ಲಿ ಇಂತಹ ಪ್ರಾಥಮಿಕ ಶಾಲೆಗಳನ್ನು ಮಾಧ್ಯಮಿಕ ಶಾಲೆಗಳನ್ನಾಗಿ ಪರಿವರ್ತಿಸಲು ಸಾಧ್ಯವಿಲ್ಲವೇ ;

ಇ) ಹೊಸದಾಗಿ ಮಾಧ್ಯಮಿಕ ಶಾಲೆ ಪ್ರಾರಂಭಿಸಿದರೆ 7ನೇ ವರ್ಗದಲ್ಲಿ ಕನಿಷ್ಟ ಎಷ್ಟು ವಿದ್ಯಾರ್ಥಿಗಳಿದ್ದರೆ ಸರಕಾರದವರು ಮಂಜೂರಾತಿ ನೀಡುವರು?

ಉತ್ತರ : ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು) — ಅ) 18,497 ಶಾಲೆಗಳು. 3.96,764 ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿರುವರು (ಪಟ್ಟಿ ಲಗತ್ತಿಸಿದೆ).

ಆ) ಹಿರಿಯ ಪ್ರಾಥಮಿಕ ಶಾಲೆಯನ್ನು ಮಾಧ್ಯಮಿಕ ಶಾಲೆ (ಪ್ರೌಢಶಾಲೆ)ಯನ್ನಾಗಿ ಇದುವರೆಗೂ ಪರಿವರ್ತಿಸಿರುವುದಿಲ್ಲ. ಪರಿವರ್ತಿಸುವ ನಿಯಮವಿರುವುದಿಲ್ಲ. ಆದರೆ 7ನೇ ಈಯತ್ತೆಯಲ್ಲಿ ಹೆಚ್ಚು ಸಂಖ್ಯೆ ಇರುವ ಪ್ರದೇಶಗಳಲ್ಲಿಯೇ ಮಾಧ್ಯಮಿಕ ಶಾಲೆಯ ಆರಂಭಕ್ಕೆ ಆದ್ಯತೆ ನೀಡುವುದು ಸರ್ಕಾರದ ನೀತಿಯಾಗಿದೆ.

ಇ) 40 ವಿದ್ಯಾರ್ಥಿಗಳು ಇದ್ದರೆ ಪರಿಗಣಿಸಬಹುದು, ಜೊತೆಗೆ ಸಮೀಪದಲ್ಲಿರುವ ಮಾಧ್ಯಮಿಕ ಶಿಕ್ಷಣ ಸೌಲಭ್ಯಗಳು, ಆ ಪ್ರದೇಶದ ಸಾಕ್ಷರತೆ, ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿ, ಇವುಗಳನ್ನೂ ಪರಿಶೀಲಿಸಲಾಗುವುದು.

ವಿಷಯ : ಸರಕಾರ ವಹಿಸಿಕೊಂಡಿರುವ ಖಾಸಗಿ ಗ್ರಂಥಾಲಯಗಳ ಸಿಬ್ಬಂದಿಯನ್ನು ಖಾಯಂಗೊಳಿಸುವುದು.

ಪ್ರಶ್ನೆ : 210 (621) ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ) — ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ರಾಜ್ಯ ಸರ್ಕಾರ, ಖಾಸಗಿ ಗ್ರಂಥಾಲಯಗಳನ್ನು ತನ್ನ ವಶಕ್ಕೆ ತೆಗೆದುಕೊಂಡಿರುವುದು ನಿಜವೇ? ಹಾಗಿದ್ದಲ್ಲಿ ಅವುಗಳ ಸಂಖ್ಯೆ ಎಷ್ಟು ;

ಆ) ಹಾಗಿದ್ದಲ್ಲಿ ಖಾಸಗಿ ಗ್ರಂಥಾಲಯಗಳನ್ನು ಸರ್ಕಾರದವರು ತನ್ನ ವಶಕ್ಕೆ ತೆಗೆದುಕೊಳ್ಳುವಾಗ ಸಂಬಂಧಪಟ್ಟ ಗ್ರಂಥಾಲಯದ ಸಿಬ್ಬಂದಿಯನ್ನು ಖಾಯಂ ಮಾಡುವುದಾಗಿ ಒಪ್ಪಿಕೊಂಡಿದ್ದು ನಿಜವೇ ;

ಇ) ಹಾಗಿದ್ದಲ್ಲಿ ಸದರಿ ಸಿಬ್ಬಂದಿಯನ್ನು ಯಾವಾಗ ಸರ್ಕಾರದವರು ಖಾಯಂ ಮಾಡುವರು ತಿಳಿಸುವಿರಾ ?

ಉತ್ತರ : ಶ್ರೀ ಬಿ. ರಾಚಯ್ಯ (ಶಿಕ್ಷಣ ಸಚಿವರು).— ಅ) ಹೌದು. 27. ಆ) ಇಲ್ಲ.